
22 ಮಾರ್ಚ್ 2020
ನೀವು ವೈರಸ್ ಬಗ್ಗೆ ಕೇಳಿದ್ದೀರಾ?
ಅವು ಎಲ್ಲವನ್ನು ಮುಚ್ಚಿಸುತ್ತವೆಯೇ?
ಫುಲಮ್ಮ ಮೈಸೂರಿನಲ್ಲಿ ಗೊಂದ್ ಸಮುದಾಯದ 43 ವರ್ಷದ ತರಕಾರಿ ಮಾರಾಟಗಾರ್ತಿ.
ಟಿವಿಯಲ್ಲಿ ಲಾಕ್‌ಡೌನ್ ಘೋಷಿಸಿದ ನಂತರ ಬಸ್ತಿಯಲ್ಲಿ ಗೊಂದಲ ಮತ್ತು ಅವ್ಯವಸ್ಥೆ ಕಂಡುಬಂದಿದೆ.
ಫುಲಮ್ಮ, ನಾವು ಲಾಕ್ಡೌನ್ ಸಮಯದಲ್ಲಿ ಹೇಗೆ ಸಂಪಾದಿಸುವುದು ಮತ್ತೆ ಹೇಗೆ ತಿನ್ನುವುದು?
ಫುಲಮ್ಮ ತನ್ನ ಉಳಿತಾಯವನ್ನು ಪರಿಶೀಲಿಸುತ್ತಾಳೆ.
ನಮ್ಮ ಹತ್ತಿರ Rs. 4000 ಇದೆ ಆದರೆ ರೇಷನ್ ಮುಗಿಯುತ್ತಾ ಬಂದಿದೆ. ಅವರು ತರಕಾರಿ ಮಾರಾಟ ಮಾಡಲು ಬಿಡುತ್ತಾರೆ, ಅಲ್ಲವೇ?
ಫುಲಮ್ಮ, ನೀವು ತರಕಾರಿ ಮಾರಾಟ ಮಾಡಬಹುದು. ಆದರೆ ನಾನು ದರ್ಜಿಯ ಕೆಲಸ ಹೇಗೆ ಮಾಡಲಿ?
ಸೈಬು ಹಾಗು ನಾನು ಕೆಲಸವಿಲ್ಲದೆ ಹೇಗೆ ಜೀವಿಸುವುದು, ಅಕ್ಕ.
ಸೈಬು ಫುಲಮ್ಮನ ಗಂಡ. ಆತ ಹತ್ತಿರದ ಮನೆಗಳಿಂದ ಕಸ ಸಂಗ್ರಹ ಮಾಡುತ್ತಾನೆ.


23 ಮಾರ್ಚ್
ಫುಲಮ್ಮ, ಇವತ್ತು ಬಸ್ಸುಗಳಿಲ್ಲದ ಕಾರಣ ನನ್ನ ಸೈಕಲ್ ತೆಗೆದುಕೊಂಡು ಹೋಗು .
ನಾನು ಅಮ್ಮನನ್ನು ಮಾರುಕಟ್ಟೆಗೆ ಕರೆದುಕೊಂಡು ಹೋಗುತ್ತೇನೆ.
ಸಂಜಯ್ ಫುಲಮ್ಮನ 14 ವರುಷದ ಮಗ.
RAND
FASH
STORE
ಅಮ್ಮ, ಜಲ್ದಿ. ಈ ಕಡೆ ಹೋಗೋಣ. ಈ ರಸ್ತೆಯಲ್ಲಿ ನನಗೆ ಪೊಲೀಸ್ ಸೈರನ್ ಕೇಳಿಸುತ್ತಿದೆ.
ರಸ್ತೆಗಳನ್ನು ನಾನು ಇಷ್ಟು ಖಾಲಿಯಾಗಿ ಯಾವತ್ತೂ ನೋಡಿಲ್ಲ!
ಬೇರೆ ಮಾರಾಟಗಾರರೂ ಇಲ್ಲಿ ಇದ್ದಾರೆ. ದೇವಸ್ಥಾನ ಹಾಗೂ ಮಸೀದಿ ಕೂಡ ತೆರೆದಿವೆ.
ಬರಿ ದೊಡ್ಡ ಅಂಗಡಿಗಳು ಮುಚ್ಚಿವೆ.
ಫುಲಮ್ಮ ತನ್ನ ಸಹದ್ಯೋಗಿಗಳನ್ನು ಮಾರುಕಟ್ಟೆಯಲ್ಲಿ ನೋಡಿ ನಿಟ್ಟುಸಿರು ಬಿಟ್ಟಳು.
ಫುಲಮ್ಮ ಪೊಲೀಸರನ್ನು ಮಾರುಕಟ್ಟೆಗೆ ಬಂದು ಮಸೀದಿಯ ಹೊರಗೆ ಕಾಯುತ್ತಿರುವುದನ್ನು ನೋಡಿದಳು. ಅಷ್ಟರಲ್ಲಿ, ದೇವಸ್ಥಾನದಲ್ಲಿ ಆರತಿ ಶುರುವಾಯಿತು.


ಮಸೀದಿಯಿಂದ ಹೊರಡುವಾಗ 11 ಪುರುಷರನ್ನು ಹೊಡೆದು ಬಂಧಿಸುವುದನ್ನು ಫುಲಮ್ಮ ನೋಡಿದಳು.
STORE


ಫುಲಮ್ಮ ಕಾನ್ಸ್ಟೇಬಲ್ ರಾಮಣ್ಣ ಪೂಜಾರಿಗೆ ದೇವಸ್ತಾನವನ್ನು ಮುಚ್ಚಲು ಹೇಳುವುದನ್ನು ನೋಡಿದಳು, ಆದರೆ ದೇವರಿಗೆ ಬೆನ್ನು ಬಾಗಿಸಿ ನಮಸ್ಕರಿಸಿ ಪ್ರಸಾದವನ್ನು ತಿನ್ನುವ ಮುಂಚೆಯಂತೂ ಅಲ್ಲ.


ದೇವಸ್ಥಾನದಲ್ಲಿರುವ ಯಾರನ್ನೂ ಬಂಧಿಸಲಿಲ್ಲ!
ಅಮ್ಮ, ದೇವಸ್ಥಾನದಲ್ಲಿ ಪೂಜೆ ಮಾಡುವುದು ತಪ್ಪಲ್ಲ. ಅಲ್ಲದೆ, ಮಸೀದಿಯಲ್ಲಿ ಹೆಚ್ಚು ಜನರಿದ್ದರು.


ಬಂಧಿಸಿದ ಮುಸಲ್ಮಾನರು ಪೊಲೀಸರಿಗೆ ಬಿಡುಗಡೆ ಮಾಡಲು ಮನವಿ ಮಾಡಿದರು. ಪೊಲೀಸರು ಲಾಕ್ ಡೌನ್ ಉಲ್ಲಂಘಿಸಿದ್ದಕ್ಕೆ ಬಯ್ಯುತ್ತಿದ್ದರು.


ಮಾಂಸ ಮಾರಾಟಗಾರರನ್ನು ಹಾಗು ರಸ್ತೆ ಬದಿ ಮಾರಾಟಗಾರರನ್ನು ಮಾರುಕಟ್ಟೆಯಿಂದ ಬೆನ್ನಟ್ಟಿ ಓಡಿಸಲು ಹೆಚ್ಚು ಪೊಲೀಸರು ಬಂದರು.
ನಾವು ಈಗಾಗಲೇ ಹಲವಾರು ಉಲ್ಲಂಘಕರನ್ನು ಬಂಧಿಸಿದ್ದೇವೆ.
ಈಗಲೇ ಹೊರಡಿ, ಅಥವಾ ನಾವು ನಮ್ಮ ಲಾರಿಯನ್ನು ಬಳಿಸಿ ನಿಮ್ಮನ್ನು ಲಾಕ್ ಅಪ್‌ಗೆ ಕಳುಹಿಸುತ್ತೇವೆ.
ಫುಲಮ್ಮ ಹಾಗು ಸಂಜಯ್ ತಮ್ಮ ತರಕಾರಿಯನ್ನು ಚೀಲಕ್ಕೆ ಹಾಕುತ್ತಿರುವಾಗ, ಪೊಲೀಸರು ಮಾಂಸ ಮಾರಾಟಗಾರ ಆಕ್ರಮ್ ಮೇಲೆ ಧಾಳಿ ನಡೆಸಿದರು.
ನನ್ನನ್ನು ಯಾಕೆ ಬಂಧಿಸುತ್ತಿದ್ದೀರಿ?
ಕಾನೂನಿನ ಪ್ರಕಾರ ಮಾಂಸ ಕೂಡ ಅಗತ್ಯ ಸಾಮಾನು!
ಕಲೆಕ್ಟರ್ ಹೇಳಿದ್ದು ಅಗತ್ಯ ಸಾಮಾನು ಬರೀ ಮನೆ ವಿತರಣೆ ಪ್ರಕಾರ ಅನುಮತಿಸಲಾಗಿದೆ.
ನಾನು ಹೇಗೆ ಮನೆ ವಿತರಣೆ ಮಾಡಲಿ?
ಸ್ವಾಮಿ, ದಯವಿಟ್ಟು ತರಕಾರಿಯನ್ನು ಬಿಟ್ಟುಬಿಡಿ.
ನಾವು ಹೋಗುತ್ತೇವೆ!
ಒಬ್ಬ ಕಾನ್ಸ್ಟೇಬಲ್ ಫುಲಮ್ಮನ ತರಕಾರಿಯನ್ನು ನಾಶ ಮಾಡುತ್ತಾನೆ.


ನೀನು ಬಂಧಿಯಾಗಿದ್ದೀಯ! ಲಾಕ್ ಡೌನ್ ಉಲ್ಲಂಘಿಸುವುದಕ್ಕೆ ನಿನ್ನ ಕಾರಣವೇನು?
ದಯವಿಟ್ಟು ಅವನನ್ನು ಬಿಟ್ಟುಬಿಡಿ, ನಾವು ಹೋಗುತ್ತಿದ್ದೇವೆ.
ಬಾಯಿ ಮುಚ್ಚು, ನಾನು ನಿನ್ನನ್ನು ಎಚ್ಚರಿಕೆಯೊಂದಿಗೆ ಬಿಡುತ್ತೇನೆ.
ನಿಮ್ಮಂಥ ಜನರು ಎಂದಿಗೂ ನಿಯಮಗಳನ್ನು ಅನುಸರಿಸುವುದಿಲ್ಲ!
ವೈರಸ್ ಇದ್ದಾಗಲೂ ನಿಮ್ಮ ಸುರಕ್ಷತೆಗಾಗಿ ನಾವು ಬಲುವಂತವಾಗಿ ಕೆಲಸ ಮಾಡಬೇಕು!
ಯಾವ ಸುರಕ್ಷತೆ? ಪೋಲೀಸರ ಹಿಂಸೆಯಿಂದ ಯಾರು ಸುರಕ್ಷೆಯಾಗಿದ್ದಾರೆ?
ಟೆಂಟ್ ಅಂಗಡಿ ಮಾಲೀಕರಾದ ಉಮಾಕಾಂತ್ ಅವರನ್ನೂ ಎಚ್ಚರಿಕೆಯೊಂದಿಗೆ ಬಿಡಲಾಗಿದೆ ಎಂದು ಫುಲಮ್ಮ ಗಮನಿಸುತ್ತಾಳೆ.
ಅಗತ್ಯ ಸರಕುಗಳ ವಿಭಾಗದಲ್ಲಿ ನೀವು ಹೇಗೆ ಅರ್ಹತೆ ಪಡೆಯುತ್ತೀರಿ?


ಎಚ್ಚರಿಕೆಯೊಂದಿಗೆ ನಾವು ನಿಮ್ಮನ್ನು ಬಿಡುತ್ತಿದ್ದೇವೆ. ಈ ಕಾಗದವನ್ನು ಇರಿಸಿ, ಅದು ನಿಮ್ಮ ನೋಟೀಸ್.
ನಾನು ಅದೃಷ್ಟಶಾಲಿ ಎಂದು ನಾನು ಊಹಿಸುತ್ತೇನೆ.
ಪೊಲೀಸರು ಮುಖ್ಯ ರಸ್ತೆಯಲ್ಲಿ ಜನರನ್ನು ಪರೀಕ್ಷಿಸುತ್ತಿರುವುದನ್ನು ಫುಲಮ್ಮ ನೋಡುತ್ತಾಳೆ . ಕೆಲವು ಜನರನ್ನು ನಿಲ್ಲಿಸುತ್ತಾರೆ ಮತ್ತು ಇತರರನ್ನು ಬಿಡುತ್ತಾರೆ.
ಪೊಲೀಸರು ಈ ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳುತ್ತಿದ್ದಾರೆ?
STORE
ಬಂಧಿತರಾಗಿರುವ ಜನರೊಂದಿಗೆ ಪೊಲೀಸರು ಗಾಡಿಯಲ್ಲಿ ಹೊರಡುತ್ತಾರೆ.
ಅವರು ಸಂಜಯ್ಯನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದಾರೆ ?! ಈ ನೋಟೀಸಿನ ಅರ್ಥವೇನು?
ಸಂಜಯ್ಯನ್ನು ಅಲ್ಲಿ ಹಿಡಿದಿಡಲಾಗಿದೆಯೇ ಎಂದು ಪರೀಕ್ಷಿಸಲು ಫುಲಮ್ಮ ಹತ್ತಿರದ ಪೊಲೀಸ್ ಠಾಣೆಗೆ ನಡೆದು ಹೋಗುತ್ತಾಳೆ.
ಪೊಲೀಸರು ಇಂದಿನ ತರಕಾರಿಗಳನ್ನು ನಾಶಮಾಡಿದ್ದಾರೆ. 4,000 ರೂಪಾಯಿಗಳೊಂದಿಗೆ ಸಂಜಯ್ಯನ್ನು ನಾನು ಹೇಗೆ ಬಿಡಿಸಿಕೊಳ್ಳಲಿ?


ಫುಲಮ್ಮನನ್ನು ಪೊಲೀಸರು ಚೆಕ್ ಪಾಯಿಂಟ್ ಹತ್ತಿರ ನಿಲ್ಲಿಸುತ್ತಾರೆ.
ಸ್ವಾಮಿ ನನ್ನ ಹೆತ್ತವರಿಗೆ ಔಷಧಿ ಖರೀದಿಸಲು ನಾನು ಹೊರಟಿದ್ದೇನೆ, ದಯವಿಟ್ಟು ನನ್ನನ್ನು ಹೋಗಲು ಬಿಡಿ.
ಸ್ವಾಮಿ, ನನ್ನ ಗಂಡ ನನ್ನನ್ನು ಪ್ರತಿದಿನ ಹೊಡೆಯುತ್ತಾನೆ. ನಾನು ನೆರೆಯ ಜಿಲ್ಲೆಯ ನನ್ನ ಹೆತ್ತವರ ಮನೆಗೆ ಹೋಗುತ್ತೇನೆ, ಇಲ್ಲದಿದ್ದರೆ ನಾನು ಲಾಕ್‌ಡೌನ್‌ನಲ್ಲಿ ಬದುಕುಳಿಯುವುದಿಲ್ಲ.
ಔಷಧಿ ಖರೀದಿಸುವ ವ್ಯಕ್ತಿ ಮತ್ತು ಗಂಡನ ಮನೆಯಿಂದ ಹೊರಡುವ ಮಹಿಳೆಗೆ ಪೊಲೀಸರು ನೋಟೀಸ್ ನೀಡುತ್ತಾರೆ.
ನೀವು ಯಾಕೆ ಹೊರಗಿದ್ದೀರಿ ಮತ್ತು ಮುಖವಾಡಗಳನ್ನು ಯೇಕೆ ಧರಿಸುತಿಲ್ಲ?
ಲಾಕ್‌ಡೌನ್ ಪರಿಸ್ಥಿತಿಗಳನ್ನು ನೋಡಲು ನಾವು ಬಂದಿದ್ದೇವೆ.
ತಿರುಗಾಡುತ್ತಿರುವ ಮೂವರು ಯುವಕರಿಗೆ ಪೊಲೀಸರು ನೋಟೀಸ್ ನೀಡುತ್ತಾರೆ.
ಒಂದು ಹೋಂಡಾ ಕಾರನ್ನು ಓಡಿಸಲು ಅನುಮತಿಸಲಾಗಿದೆ ಎಂದು ಫುಲಮ್ಮ ಗಮನಿಸುತ್ತಾಳೆ.
ಕಾರನ್ನು ಹೋಗಲು ಬಿಡಿ, ಅವರು ದಿನಸಿ ಪಡೆಯುತ್ತಿದ್ದಾರೆ!
ನಂತರ ನೇರವಾಗಿ ಮನೆಗೆ ಹೋಗಿ, ಅಲ್ಲಿ ಇಲ್ಲಿ ಕಾಲಹರಣ ಮಾಡಬೇಡಿ!


ಪೊಲೀಸರು ಫುಲಮ್ಮನನ್ನು ಪ್ರಶ್ನಿಸುತ್ತಾರೆ ಮತ್ತು ಅವಳು ತನ್ನ ನೋಟೀಸನ್ನು ತೋರಿಸುತ್ತಾಳೆ.
ನನ್ನ ಮಗನನ್ನು ಬಂಧಿಸಿದ್ದಾರೆ. ದಯವಿಟ್ಟು, ನಾನು ಪೊಲೀಸ್ ಠಾಣೆಗೆ ಹೋಗಬೇಕು.
ಪೊಲೀಸರು ನೋಟೀಸನ್ನು ಹೊಂದಿರುವ ಪ್ರತಿಯೊಬ್ಬರನ್ನು ಶಿಕ್ಷೆಯಾಗಿ ಬಸ್ಕಿ ಮಾಡಿಸುತ್ತಾರೆ.
ಲಾಕ್‌ಡೌನ್ ಅನ್ನು ಉಲ್ಲಂಘಿಸಲು ನಿಮ್ಮಲ್ಲಿ ಯಾರಿಗೂ ತೃಪ್ತಿದಾಯಕ ಕಾರಣಗಳಿಲ್ಲ. ಮನೆಯಲ್ಲೇ ಇರಿ.
ಫುಲಮ್ಮ ಹತ್ತಿರದ ಪೊಲೀಸ್ ಠಾಣೆ ತಲುಪಲು ನಿರ್ವಹಿಸುತ್ತಾಳೆ.
ಹೊರಗೆ ಹೋಗು! ನಿನ್ನ ಮಗ ಇಲ್ಲಿಲ್ಲ ಹಾಗು ಲಾಕ್‌ಡೌನ್ ಚಾಲನೆಯಲ್ಲಿದೆ, ಮನೆಗೆ ಹೋಗು!
ನಿಲ್ದಾಣದ ಹೊರಗೆ, ಕೆಲವು ಕಾನ್‌ಸ್ಟೆಬಲ್‌ಗಳು ಕೈ ತೊಳೆಯುವ ಬಗ್ಗೆ ನಟನಾ ವೀಡಿಯೊಗಳನ್ನು ಚಿತ್ರೀಕರಿಸುತ್ತಿದ್ದಾರೆ.
ಮತ್ತೊಮ್ಮೆ ಮಾಡಿ, ಕೊನೆಯ ಕೆಲವು ಸೆಕೆಂಡುಗಳು ಮಸುಕಾಗಿವೆ.


ನಿರುತ್ಸಾಹಗೊಂಡು ಹಾಗು ಚಿಂತಿತಗೊಂಡು, ಫುಲಮ್ಮ ಮನೆಗೆ ಹೋಗುತ್ತಾಳೆ.
ಸಂಜಯ್ ಎಲ್ಲಿ?
ಅವನನ್ನು ಬಂಧಿಸಲಾಗಿದೆ.
ಪೊಲೀಸರು ಬಸ್ತಿಯಲ್ಲಿಯೂ ಜನರನ್ನು ಬಂಧಿಸಿದ್ದಾರೆ.


ಮಹೌರ ಹುಡುಕುತ್ತಾ ಬಸ್ತಿಯಲ್ಲಿರುವ ಪಾರ್ಧಿ ಜನರ ಮನೆಗಳನ್ನು ಗುರುತಿಸಿ ಪೊಲೀಸರು ಕೊಳ್ಳೆ ಹೊಡೆದರೆಂದು ಸೈಬು ಫುಲಮ್ಮನಿಗೆ ಹೇಳುತ್ತಾನೆ. ಮಹೌರ ಎಂಬ ಸಾಂಪ್ರದಾಯಿಕ ಮದ್ಯವನ್ನು ಪಾರ್ಧಿ ಜನರು ತಮ್ಮ ಜೀವನೋಪಾಯಕ್ಕಾಗಿ ತಯಾರಿಸುತ್ತಾರೆ.
ಸ್ವಾಮಿ ದಯವಿಟ್ಟು ಬಿಡಿ, ನಾನು 2 ತಿಂಗಳ ಹಿಂದೆಯೇ ಮದ್ಯ ಮಾರಾಟವನ್ನು ನಿಲ್ಲಿಸಿದೆ!


ಜೂಜಿನ ಕಾನೂನಿನ ಪ್ರಕಾರ ಇಸ್ಪೀಟ್ ಆಡುತ್ತಿದ್ದ ಪುರುಷರನ್ನು ಪೊಲೀಸರು ಬಂಧಿಸಿದ್ದರು.
ಯಾರಾದರೂ ತಮ್ಮ ಮನೆಯಿಂದ ಹೊರಬಂದರೆ ಅಥವಾ ಬಸ್ತಿಯಿಂದ ಹೊರಬಂದರೆ, ಅವರನ್ನು ಬಂಧಿಸಲಾಗುವುದು!


ಅಳಬೇಡ ಫುಲಮ್ಮ, ಸಂಜಯ್ ಗೊಂದ್ ಸಮುದಾಯದವನು. ಇದು ಯಾವಾಗಲೂ ನಮ್ಮ ಜಾತಿಯ ಜನರಿಗೆ ಆಗುತ್ತದೆ. ನನ್ನನ್ನು ಕ್ಷುಲ್ಲಕವಾಗಿ ಬಂಧಿಸಲಾಗಿತ್ತು, ಆದರೆ ನಾನು ಇನ್ನೂ ಇಲ್ಲಿದ್ದೇನೆ. ಅವನು ಚೆನ್ನಾಗಿರುತ್ತಾನೆ.


ಆದಿವಾಸಿಗಳ ಭವಿಷ್ಯ ಏಕೆ ಇಷ್ಟು ದರಿದ್ರವಾಗಿದೆ? ಪೊಲೀಸರು ನಮ್ಮ ಸಮುದಾಯಗಳನ್ನು ಏಕೆ ಗುರಿಯಾಗಿಸುತ್ತಾರೆ? ನನ್ನ ಮಗನನ್ನು ನಾನು ಹೇಗೆ ಬಿಡುಗಡೆಗೊಳಿಸಲಿ?
ಪೊಲೀಸರ ಪ್ರಕಾರ, ಲಾಕ್‌ಡೌನ್ ಅನ್ನು ಉಲ್ಲಂಘಿಸಲು 'ತೃಪ್ತಿದಾಯಕ' ಕಾರಣವೇನು?! ನಮ್ಮ ಕುಟುಂಬಗಳನ್ನು ಪೋಷಿಸಲು ನಾವು ಕೆಲಸ ಮಾಡಬಾರದೇ?
20 ಮೇ
ಅಕ್ರಮ್ ಇನ್ನೂ ಬಂದಿಲ್ಲವೇ?
ಅವನು ಬಹುಶಃ ಇನ್ನೂ ಜೈಲಿನಲ್ಲಿದ್ದಾನೆ, ಫುಲಮ್ಮನ ಮಗನೊಂದಿಗೆ.
ಲಾಕ್‌ಡೌನ್ ತೆಗೆದ ನಂತರ ಫುಲಮ್ಮ ಮಾರುಕಟ್ಟೆಗೆ ಹೋಗುತ್ತಾಳೆ.
ನಮ್ಮ ಕುಟುಂಬಗಳು ನಾಳೆ ಪೂರ್ಣ ಊಟ ಮಾಡುವುದಕ್ಕೆ ನಾವೆಲ್ಲರೂ ಸಾಕಷ್ಟು ಹಣವನ್ನು ಸಂಪಾದಿಸುತ್ತೇವೆ ಎಂದು ನಾನು ಆಶಿಸುತ್ತೇನೆ.
ಫುಲಮ್ಮ ನೋಟೀಸ್ ಪತ್ರಿಕೆಯನ್ನು ಇಟ್ಟುಕೊಂಡಿರುತ್ತಾಳೆ, ಅದರ ಅರ್ಥವನ್ನು ಅರ್ಥಮಾಡಿಕೊಳ್ಳದೆ.